# ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಚರಿತ್ರೆ ವಿಭಾಗ

## ಕರ್ನಾಟಕದ ಚರಿತ್ರೆಕಾರರು ಮತ್ತು ಚರಿತ್ರೆ ರಚನೆ

**ಐದು ದಿನಗಳ ಆನ್‌ಲೈನ್ ಉಪನ್ಯಾಸ ಮಾಲೆ**

**ದಿನಾಂಕ 23.09.2024 ರಿಂದ 27.09.2024ರ ವರೆಗೆ**

ಕನ್ನಡ ವಿಶ್ವವಿದ್ಯಾಲಯದ **ಚರಿತ್ರೆ ವಿಭಾಗದ** ವತಿಯಿಂದ ದಿನಾಂಕ **23.09.2024 ರಿಂದ 27.09.2024ರ ವರೆಗೆ "ಕರ್ನಾಟಕದ ಚರಿತ್ರೆಕಾರರು ಮತ್ತು ಚರಿತ್ರೆ ರಚನೆ"** ಎಂಬ ವಿಷಯದ ಕುರಿತು **ಐದು ದಿನಗಳ ಆನ್‌ಲೈನ್ ಉಪನ್ಯಾಸಗಳು** ಜರುಗಿದವು.



ಚರಿತ್ರೆ ವಿಭಾಗದ ವತಿಯಿಂದ ದಿನಾಂಕ 23.09.2024 ರಿಂದ 27.09.2024ರ ವರೆಗೆ ಐದು ದಿನಗಳ ಆನ್‌ಲೈನ್ ಉಪನ್ಯಾಸಗಳು ಜರುಗಿದವು ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಡಿ.ವಿ.ಪರಮಶಿವಮೂರ್ತಿ ಅವರು ವಹಿಸಿ, ಉದ್ಘಾಟನಾ ನುಡಿಗಳನ್ನಾಡಿದರು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ **ಡಾ.ಡಿ.ವಿ.ಪರಮಶಿವಮೂರ್ತಿ** ಅವರು ವಹಿಸಿ, ಉದ್ಘಾಟನಾ ನುಡಿಗಳನ್ನಾಡಿದರು. ಚರಿತ್ರೆಯನ್ನು ಅರಿತುಕೊಳ್ಳುವ ಮೊದಲು ಚರಿತ್ರೆಕಾರರನ್ನು ತಿಳಿಯಬೇಕೆಂದು ಅವರು ಹೇಳಿದರು. ವಿಭಾಗದ ಮುಖ್ಯಸ್ಥರಾದ **ಡಾ.ಕೆ.ಮೋಹನ್‌ಕೃಷ್ಣರೈ** ಅವರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಈ ಆನ್‌ಲೈನ್ ಉಪನ್ಯಾಸಮಾಲೆಯಲ್ಲಿ ಚರಿತ್ರೆಕಾರರಾದ **ಡಾ.ಬಿ.ಎಸ್.ಸಾಲೆತ್ತೂರ್, ಡಾ.ಎ.ಎಸ್.ಆಲ್ಟೇಕರ್, ಡಾ.ಕೆ.ಎಸ್.ಶಿವಣ್ಣ, ಡಾ.ಕೆ.ವೀರತಪ್ಪ** ಹಾಗೂ **ಡಾ.ಬಿ.ಎಸ್.ಶಾಸ್ತ್ರಿ** ಅವರ ಬದುಕು ಮತ್ತು ಸಾಧನೆ ಕುರಿತು **5 ಉಪನ್ಯಾಸಗಳನ್ನು** ನೀಡಿದ **ಡಾ.ಬಿ.ಜಗದೀಶ ಶೆಟ್ಟಿ, ಡಾ.ಐ.ಕೆ.ಪತ್ತಾರ, ಡಾ.ಕೆ.ಸದಾಶಿವ, ಡಾ.ಅಶ್ವತ್ಥನಾರಾಯಣ** ಹಾಗೂ **ಡಾ.ಶ್ಯಾಮ್ ಭಟ್** ಅವರು ಕರ್ನಾಟಕದ ಸ್ಥಳೀಯ ಮತ್ತು ಪ್ರಾದೇಶಿಕ ಚರಿತ್ರೆ ರಚನೆಗೆ ಈ ಚರಿತ್ರೆಕಾರರ ಕೊಡುಗೆಯನ್ನು ವಿಸ್ತೃತವಾಗಿ ಕನ್ನಡ ನಾಡಿಗೆ ಪರಿಚಯಿಸಿದರು.

**ಡಾ.ಶ್ಯಾಮ್‌ಭಟ್** ಅವರು **ಸಮಾರೋಪ ನುಡಿಗಳನ್ನಾಡಿ** ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಈ ಚರಿತ್ರೆಕಾರರು ಗುರುತಿಸಿಕೊಂಡಿದ್ದನ್ನು ತಿಳಿಯುವುದು ಇಂದಿನ ಯುವ ಸಂಶೋಧಕರ ಜವಾಬ್ದಾರಿ ಎಂಬುದಾಗಿ ಅಭಿಪ್ರಾಯಪಟ್ಟರು.

ವಿಭಾಗದ ಹಿರಿಯ ಪ್ರಾಧ್ಯಾಪಕರಾದ **ಡಾ.ವಿಜಯ್ ಪೂಣಚ್ಚ ತಂಬಂಡ, ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಡಾ.ಎನ್.ಚಿನ್ನಸ್ವಾಮಿ ಸೋಸಲೆ** ಅವರು ಮತ್ತು ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಆನ್‌ಲೈನ್

ಮೂಲಕ ಪ್ರತಿದಿನವೂ 70ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಚರಿತ್ರೆ ವಿದ್ವಾಂಸರು, ಸಂಶೋಧಕರು, ವಿದ್ಯಾರ್ಥಿಗಳು ಮತ್ತು ಇತಿಹಾಸಕ್ತರು ಭಾಗವಹಿಸಿದ್ದರು. ಸಂಶೋಧನಾ ವಿದ್ಯಾರ್ಥಿಗಳಾದ ಮಣಿಕಂಠ ಹಂಗಳ, ನರಸಿಂಹರಾಜು ಎಚ್.ಸಿ., ಸೋಮಪ್ಪ ಸಿ, ಪ್ರದೀಪ ಎಚ್. ಮತ್ತು ಮಹೇಶ ವಿ. ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಗಣಕಕೇಂದ್ರದ ನಿರ್ದೇಶಕರಾದ **ಎಸ್.ಕೆ.ವಿಜಯೇಂದ್ರ** ಮತ್ತು ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮದ ಉಪನ್ಯಾಸಕರಾದ **ಡಾ.ಎಸ್.ಕೆ.ಲೋಕೇಶ** ಅವರು ತಾಂತ್ರಿಕ ಸಹಕಾರ ನೀಡಿದರು.








ಶನಿವಾರ,28 ಸೆಪ್ಟೆಂಬರ್ 2024,
ಗಂಗಾವತಿ

ವಿಜಯ ಕರ್ನಾಟಕ VK

# ಆನ್‌ಲೈನ್ ಉಪನ್ಯಾಸ ಕಾರ್ಯಕ್ರಮ

ವಿಕ ಸುದ್ದಿಲೋಕ
ವಿಜಯನಗರ(ಹೊಸಪೇಟೆ)

ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದಿಂದ ಸೆ.23ರಿಂದ 27ರವರೆಗೆ ಕರ್ನಾಟಕದ ಚರಿತ್ರೆಕಾರರು ಮತ್ತು ಚರಿತ್ರೆ ರಚನೆ ಎಂಬ ವಿಷಯದ ಕುರಿತು ಐದು ದಿನಗಳ ಆನ್‌ಲೈನ್ ಉಪನ್ಯಾಸಗಳು ನಡೆಯಿತು.

ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅಧ್ಯಕ್ಷತೆವಹಿಸಿ ಮಾತನಾಡಿ, ಚರಿತ್ರೆಯನ್ನು ಅರಿತುಕೊಳ್ಳುವ ಮೊದಲು ಚರಿತ್ರೆಕಾರರನ್ನು ತಿಳಿಯಬೇಕೆಂದು ಹೇಳಿದರು.

ಚರಿತ್ರೆ ವಿಭಾಗದ ಮುಖ್ಯಸ್ಥ ಡಾ.ಕೆ. ಮೋಹನ್‌ಕೃಷ್ಣರೈ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಈ ಆನ್‌ಲೈನ್ ಉಪನ್ಯಾಸಮಾಲೆಯಲ್ಲಿ ಚರಿತ್ರೆಕಾರರಾದ ಡಾ.ಬಿ.ಎಸ್.ಸಾಲೆತ್ತೂರ್, ಡಾ.ಎ.ಎಸ್.ಆಲ್ಟೇಕರ್, ಡಾ.ಕೆ.ಎಸ್. ಶಿವಣ್ಣ ಡಾ.ಕೆ.ವೀರತಪ್ಪ ಹಾಗೂ ಡಾ.ಬಿ.ಎಸ್.ಶಾಸ್ತ್ರಿ ಅವರ ಬದುಕು ಮತ್ತು ಸಾಧನೆ ಕುರಿತು 5 ಉಪನ್ಯಾಸ ನೀಡಿದ ಡಾ.ಬಿ.ಜಗದೀಶ ಶೆಟ್ಟಿ, ಡಾ.ಐ.ಕೆ.ಪತ್ತಾರ, ಡಾ.ಕೆ.ಸದಾಶಿವ, ಡಾ.ಅಶ್ವತ್ಥನಾರಾಯಣ ಹಾಗೂ ಡಾ.ಶ್ಯಾಮ್ ಭಟ್ ಅವರು ಕರ್ನಾಟಕದ ಸ್ಥಳೀಯ ಮತ್ತು ಪ್ರಾದೇಶಿಕ ಚರಿತ್ರೆ ರಚನೆಗೆ ಈ ಚರಿತ್ರೆಕಾರರ ಕೊಡುಗೆಯನ್ನು ವಿಸ್ತೃತವಾಗಿ ಕನ್ನಡ ನಾಡಿಗೆ ಪರಿಚಯಿಸಿದರು.

ಹಿರಿಯ ಪ್ರಾಧ್ಯಾಪಕ ಡಾ.ವಿಜಯ್ ಪೂಣಚ್ಚ ತಂಬಂಡ, ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಡಾ.ಎನ್.ಚಿನ್ನಸ್ವಾಮಿ ಸೋಸಲೆ ಮತ್ತು ಸಂಶೋಧನಾ ವಿದ್ಯಾರ್ಥಿಗಳು ಇದ್ದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ ಆನ್‌ಲೈನ್ ಉಪನ್ಯಾಸದಲ್ಲಿ ಸಹಾಯಕ ಪ್ರಾಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಭಾಗಿಯಾಗಿದ್ದರು.